pravin godkhindi

**ಪ್ರವೀಣ ಗೋಡಖಿಂಡಿ**

ಪ್ರಮುಖ ಸಾಧನೆಗಳು :

1) 8 ಅಡಿಯ **'ಕಾಂಟ್ರಾಬಾಸ್ ಫ್ಲ್ಯೂಟ್'** ನಲ್ಲಿ ಹಿಂದುಸ್ತಾನಿ ಸಂಗೀತವನ್ನು ನುಡಿಸಿದ ಮೊಟ್ಟಮೊದಲನೆಯ ಭಾರತೀಯ. ಇಡೀ ಜಗತ್ತಿನಲ್ಲಿ ಕೇವಲ 5–6 ಕಲಾವಿದರು ಮಾತ್ರ ಈ ವಾದ್ಯವನ್ನು ನುಡಿಸುತ್ತಾರೆ. ಇದು ಕರ್ನಾಟಕ ರಾಜ್ಯಕ್ಕೆ ಹೆಮ್ಮೆಯ ವಿಷಯ.
2) ಹಿಂದುಸ್ತಾನಿ ಬಾನ್ಸುರಿ ವಾದನ ಕ್ಷೇತ್ರದಲ್ಲಿ ಆಕಾಶವಾಣಿಯ ಅತ್ಯುನ್ನತ **"ಎ–ಟಾಪ್"** ಶ್ರೇಣಿ ಪಡೆದ ದಕ್ಷಿಣ ಭಾರತದ ಮೊಟ್ಟಮೊದಲನೆಯ ಕಲಾವಿದ.
3) ಅರ್ಜೆಂಟಿನಾದ ಮೆಂಡೋಜಾದಲ್ಲಿ ನಡೆದ ವಿಷ್ವ ಕೊಳಲು ಸಮ್ಮೇಳನದಲ್ಲಿ ಭಾಗವಹಿಸಿ ಭಾರತವನ್ನು ಪ್ರತಿನಿಧಿಸಿದ ಮೊಟ್ಟಮೊದಲನೆಯ ಕಲಾವಿದ.
4) HARMAN/AKG **ಬ್ರಾಂಡ್ ಅಂಬಾಸಿಡರ್** – ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಹೆಸರಾಂತ ಮೈಕ್ರೊಫೋನ್ ಮತ್ತು ಧ್ವನಿವರ್ಧಕ ಕಂಪನಿಯಿಂದ ಬ್ರಾಂಡ ಅಂಬಾಸಿಡರ್ ಪದವಿ.

**ರಾಷ್ಟ್ರೀಯ ಪ್ರಶಸ್ತಿಗಳು:**

**'ಬೇರು'** ಹಾಗೂ **'ವಿಮುಕ್ತಿ'** ಚಲನಚಿತ್ರಗಳಿಗೆ ರಾಷ್ಟ್ರ ಪ್ರಷಸ್ತಿ. ಈ ಚಿತ್ರಗಳಿಗೆ ಹಿನ್ನೆಲೆ ಸಂಗೀತ ನೀಡಿದ್ದಲ್ಲದೇ ಸಹ– ನಿರ್ಮಾಪಕರಾಗಿ ಪ್ರಶಸ್ತಿಗೆ ಭಾಜನರಾದವರು.

**'ಸೂರಮಣಿ'** – 16ನೆಯ ವಯಸ್ಸಿಗೆ ಮುಂಬೈಯ ಸೂರಸಿಂಗಾರ ಸಂಸದ್ ಅವರು ದಯಪಾಲಿಸಿದ ಪ್ರಶಸ್ತಿ.

**ಪ್ರಥಮ ಬಹುಮಾನ** – 18ನೆಯ ವಯಸ್ಸಿಗೆ ಆಕಾಶವಾಣಿಯ ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ.

# 212, 'BANSURI', 6th Main, Sapthagirinagar Layout, Hosakerehalli,
BSK 3rd Stage, Bangalore – 560085. Ph: 080-26723855. e:pravingodkhindi@hotmail.com

pravin godkhindi

**‘ಎ’ ಶ್ರೇಣಿ ಕಲಾವಿದ** – 21ನೆಯ ವಯಸ್ಸಿಗೆ ಆಕಾಶವಾಣಿಯ ‘ಎ’ ಶ್ರೇಣಿ ಕಲಾವಿದ.

**ಪಂ. ಪನ್ನಾಲಾಲ ಘೋಷ ಸ್ಮೃತಿ ಗೌರವ ಪುರಸ್ಕಾರ** – ಪನ್ನಾಲಾಲ್ ಘೋಷ್ ಸಂಗೀತ ಸಂಸ್ಥೆ, ಕೊಲ್ಲಾಪೂರ (2011).

**ಆಸ್ಥಾನ ಸಂಗೀತ ವಿದ್ವಾನ್** – ಉಡುಪಿಯ ಶ್ರೀಕೃಷ್ಣ ಮಠದಿಂದ ಹಾಗೂ ಶೃಂಗೇರಿಯ ಶಾರದಾ ಪೀಠದಿಂದ ದೊರೆತ ಪ್ರಶಸ್ತಿಗಳು.

**‘ವೇಣು ಗಾನ ಮಹರಾಜ’** – 2012 ರಲ್ಲಿ ಚೆನ್ನಯ್‌ನ Trinity Music Association ನವರು ಈ ಪದವಿಯಿಂದ ಸನ್ಮಾನಿಸಿದ್ದಾರೆ.

## ರಾಜ್ಯ ಮಟ್ಟದಲ್ಲಿ ಗಳಿಸಿದ ಪ್ರಶಸ್ತಿಗಳು:

**ಆಸ್ಥಾನ ಸಂಗೀತ ವಿದ್ವಾನ್** – ಉಡುಪಿಯ ಶ್ರೀಕೃಷ್ಣ ಮಠದಿಂದ ಹಾಗೂ ಶೃಂಗೇರಿಯ ಶಾರದಾ ಪೀಠದಿಂದ ದೊರೆತ ಪ್ರಶಸ್ತಿಗಳು.

**ಉತ್ತಮ ಸಂಗೀತಪ್ರಧಾನ ಧಾರಾವಾಹಿ ಪ್ರಶಸ್ತಿ** – ESSEL World ಮತ್ತು ಝೀ ಟಿ.ವಿ. ಅವರಿಂದ ‘ರಾಗರಂಜಿನಿ’ ಸಂಗೀತಪ್ರಧಾನ ಟಿ.ವಿ. ಧಾರಾವಾಹಿಗೆ ದೊರೆತಿದೆ.

**ಕೆಂಪೇಗೌಡ ಪ್ರಶಸ್ತಿ** – ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು (2011).

**ಉತ್ತಮ ಸಂಗೀತ ಸಂಯೋಜಕ** – ‘ರಾಧಾಕಲ್ಯಾಣ’ ಟಿ.ವಿ. ಧಾರಾವಾಹಿಗೆ KIMA ಸಂಸ್ಥೆಯಿಂದ (2013)

**ಆರ್ಯಭಟ್ಟ** – ‘ಮಳೆಬಿಲ್ಲು’ ಟಿ.ವಿ. ಧಾರಾವಾಹಿಯ ಶೀರ್ಷಿಕೆ ಗೀತೆಯ ಸಂಗೀತ ಸಂಯೋಜನೆಗೆ.

# 212, ‘BANSURI’, 6th Main, Sapthagirinagar Layout, Hosakerehalli,
BSK 3rd Stage, Bangalore – 560085. Ph: 080-26723855. e:pravingodkhindi@hotmail.com

# pravin godkhindi

**ಅತ್ಯುತ್ತಮ ಸಂಗೀತ ನಿರ್ದೇಶಕ** – 'ಶ್ರೀ ನಾರಾಯಣಗುರುಸ್ವಾಮಿ' ತುಳು ಚಲನಚಿತ್ರಕ್ಕೆ 2014ರಲ್ಲಿ ಕರ್ನಾಟಕ ಚಲನಚಿತ್ರ ರಸಿಕರ ಸಂಘದ ವತಿಯಿಂದ ಸಂದ ಗೌರವ.

**ನಾದನಿಧಿ** – ಕಲಾಚೇತನ, ಗದಗ.

**ಸೂರಸಾಮ್ರಾಟ, ಕಲಾಪ್ರವೀಣ, ಕಲಾವತಂಸ** ಮತ್ತು **ಸಂಸ್ಕೃತಿಸಿಂಚನ** – ಇವುಗಳು ಇವರಿಗೆ ಸಂದ ಇನ್ನಿತರ ಪುರಸ್ಕಾರಗಳು.

**ಬೆಳಗಾಂ ನಲ್ಲಿ ನಡೆದ ವಿಷ್ವ ಕನ್ನಡ ಸಮ್ಮೇಳನ ಸೇರಿ ಮೈಸೂರು ದಸರಾ, ಹಂಪಿ ಉತ್ಸವ, ಕಿತ್ತೂರು ಉತ್ಸವ, ಲಕ್ಕುಂಡಿ ಉತ್ಸವ, ಧಾರವಾಡ ಉತ್ಸವ, ಬಿಜಾಪುರ, ಹಾನಗಲ್, ಚಿತ್ರದುರ್ಗ, ಕರಾವಳಿ ಉತ್ಸವ ಇತ್ಯಾದಿ ವಿವಿಧ ರಾಜ್ಯ ಮಟ್ಟದ ಸಾಂಸ್ಕೃತಿಕ ಉತ್ಸವಗಳಲ್ಲಿ ಅನೇಕ ಬಾರಿ ಭಾಗವಹಿಸಿ ಯಶಸ್ವಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.**

**ಅಮೇರಿಕದ "ಅಕ್ಕಾ ಮತ್ತು ನಾವಿಕಾ" ಅಲ್ಲದೇ, ದುಬೈ, ಕತಾರ್, ಹಾಂಗ್‌ಕಾಂಗ್, ಸಿಂಗಾಪುರ್, ಕುವೇತ್, ಬಹರೇನ್, ಕೆನಡಾ ಮುಂತಾದ ದೇಶದ ಕನ್ನಡ ಸಂಘಗಳಲ್ಲಿ ಭಾಗವಹಿಸಿ ಯಶಸ್ವಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.**

# 212, 'BANSURI', 6th Main, Sapthagirinagar Layout, Hosakerehalli,
BSK 3rd Stage, Bangalore – 560085. Ph: 080-26723855. e:pravingodkhindi@hotmail.com

**ಪ್ರವೀಣ ಗೋಡಖಿಂಡಿ**

**ಗುರು ಮತ್ತು ಬಾಲ್ಯಪ್ರತಿಭೆ**

ಕಲಾವಿದರ ವಂಶದಲ್ಲಿ ಜನಿಸಿರುವ ಪ್ರವೀಣ ಗೋಡಖಿಂಡಿ ಅವರಿಗೆ ಸಂಗೀತ ದೈವದತ್ತ ದೇಣಿಗೆ. ಪಂ.ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್, ಡಾ. ಮಲ್ಲಿಕಾರ್ಜುನ ಮನಸೂರ, ಪಂ. ಕುಮಾರಗಂಧರ್ವ ಮುಂತಾದ ಸಂಗೀತ ದಿಗ್ಗಜರನ್ನು ಪ್ರಪಂಚಕ್ಕೆ ಪರಿಚಯಿಸಿದ ಧಾರವಾಡ ಪ್ರವೀಣ ಅವರ ಮೂಲ ನೆಲೆ. ತಂದೆ ಹೆಸರಾಂತ ಗಾಯಕ ಮತ್ತು ಕೊಳಲುವಾದಕ ಪಂ. ವೆಂಕಟೇಶ ಗೋಡಖಿಂಡಿ ಅವರನ್ನು ಪ್ರಥಮ ಮತ್ತು ಏಕೈಕ ಗುರುವಾಗಿ ಪಡೆದುದು ಇವರ ಸುದೈವ. ತಮ್ಮ ಮೂರನೆಯ ವಯಸ್ಸಿನಲ್ಲಿಯೇ ಚಿಕ್ಕ ಆಟಿಗೆಯ ಕೊಳಲಿನಲ್ಲಿ ನಾದಮಾಧುರ್ಯ ಹೊರಡಿಸುತ್ತಿದ್ದ ಪ್ರವೀಣ ಅವರಿಗೆ, ಕ್ರಮೇಣ ಬಾಂಸುರಿಯೇ ಬಾಳಿನ ಉಸಿರಾಯಿತು. ಬಾಲ್ಯದಲ್ಲಿ ಕೊಳಲಿನ ಹೊರತು ಬೇರೆ ಇನ್ನಾವುದರ ಕಡೆಗೂ ಅವರು ಮೋಹಿತರಾಗಿರಲಿಲ್ಲ. ಸಮರ್ಥ ಗುರುವಿನ ಮಾರ್ಗದರ್ಶನ, ಸತತ ಮತ್ತು ಪರಿಶ್ರಮಪೂರ್ವಕ ರಿಯಾಜ್‌ನಿಂದಾಗಿ ಪ್ರವೀಣ ಸಂಗೀತಲೋಕದ ಮಾಂತ್ರಿಕನಾಗಿ ಹೊರಹೊಮ್ಮಿದರು. ತಮ್ಮ 6ನೆಯ ವಯಸ್ಸಿನಲ್ಲಿಯೇ ಸಾರ್ವಜನಿಕ ಸಮಾರಂಭವೊಂದರಲ್ಲಿ ಕೊಳಲು ನುಡಿಸಿ, ಸಭಿಕರು ಮಂತ್ರಮುಗ್ಧಗೊಳ್ಳುವಂತೆ ಮಾಡಿದ್ದರು. ಲಯಕಾರಿಯಲ್ಲಿ ಹೆಚ್ಚಿನ ಜ್ಞಾನ ಸಂಪಾದಿಸಬೇಕೆಂಬ ಅಭೀಪ್ಸೆಯುಳ್ಳ ಪ್ರವೀಣ ಮುಂದೆ ಹೆಸರಾಂತ ಮೃದಂಗವಾದಕ ವಿದ್ವಾನ್ ಆನೂರು ಅನಂತ ಕೃಷ್ಣಶರ್ಮ ಅವರ ಸಮರ್ಥ ಮಾರ್ಗದರ್ಶನದಲ್ಲಿ ಲಯ ಮತ್ತು ಲಯಕಾರಿಗಳಲ್ಲಿ ಆಳವಾದ ಜ್ಞಾನ ಸಂಪಾದಿಸಿದರು.

# 212, 'BANSURI', 6th Main, Sapthagirinagar Layout, Hosakerehalli,
BSK 3rd Stage, Bangalore – 560085. Ph: 080-26723855. e:pravingodkhindi@hotmail.com

pravin godkhindi

**ಕೊಳಲುವಾದನದ ಎರಡು ವಿಭಿನ್ನ ಶೈಲಿಗಳು**

ತಂದೆ ಕೊಳಲುವಾದನದಲ್ಲಿ ಕಿರಾಣಾ ಘರಾಣೆಯ ಗಾಯಕಿ ಶೈಲಿಯನ್ನು ಕಲಿಸಿದರು. ಆದರೆ ಪ್ರವೀಣ ಸ್ವಂತ ಸಾಧನೆಯಿಂದ, ಗತಕಾರಿ ಅಥವಾ ತಂತ್ರಕಾರಿ ಶೈಲಿಯನ್ನು ಕರಗತ ಮಾಡಿಕೊಂಡು ಅದರಲ್ಲಿಯೂ ಯಶಸ್ವಿಯಾಗಿದ್ದಾರೆ. ಎರಡೂ ಶೈಲಿಗಳಲ್ಲಿ ಅವರು ಅಷ್ಟೇ ಪ್ರಾವೀಣ್ಯತೆ ಪಡೆದಿದ್ದಾರೆ. ಸುಲಲಿತ ಫೂತ್ಕಾರ, ಉಸಿರಿನ ಮೇಲಿನ ಹಿಡಿತ, ರಾಗದ ವಿಸ್ತಾರ ಮತ್ತು ಅದರ ಸೌಂದರ್ಯನಿರೂಪಣೆ, ಲಯಕಾರಿ ಚಾತುರ್ಯ ಇತ್ಯಾದಿಗಳು ಪ್ರವೀಣರ ಕೊಳಲುವಾದನದ ಪ್ರಮುಖ ವೈಶಿಷ್ಟ್ಯಗಳು. ಶಾಸ್ತ್ರೀಯ ಮತ್ತು ರಚನಾತ್ಮಕ ಸಂಗೀತಗಳೆರಡನ್ನೂ ಇವರು ಸಮರ್ಥವಾಗಿ ಸರಿದೂಗಿಸಬಲ್ಲರು. ಪಾಶ್ಚಾತ್ಯ (ಜಾಝ್) ಮತ್ತು ಕರ್ನಾಟಕ ಸಂಗೀತಗಳು ಕೂಡ ಇವರ ಮೇಲೆ ಪೂರಕವಾಗಿ ಪ್ರಭಾವ ಬೀರಿವೆ.

ಶೈಕ್ಷಣಿಕ ತರಗತಿಗಳಲ್ಲಿ ಮೊದಲಿನಿಂದಲೂ ಪ್ರಥಮ ಶ್ರೇಣಿಯ ವಿದ್ಯಾರ್ಥಿಯೆನಿಸಿದ್ದ ಪ್ರವೀಣ, ಬಿ.ಇ. (ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್) ಪದವಿಯನ್ನು ಡಿಸ್ಟಿಂಕ್ಷನ್ ಸಹಿತ ಪ್ರಥಮ ವರ್ಗದಲ್ಲಿ ಉತ್ತೀರ್ಣರಾಗಿದ್ದಾರೆ.

ಪ್ರವೀಣ ಗೋಡಖಿಂಡಿ ಅವರು ವಿದೇಶಗಳಲ್ಲಿಯೂ ಸಂಚರಿಸಿ ಕೊಳಲುವಾದನ ಮತ್ತು ಫ್ಯೂಶನ್ ಶೈಲಿಯಿಂದ ಖ್ಯಾತಿ ಪಡೆದಿದ್ದು, ಅವರು ಸಂದರ್ಶಿಸಿದ ಪ್ರಮುಖ ದೇಶಗಳೆಂದರೆ – ಅಮೇರಿಕ, ಕೆನಡಾ, ಸ್ಪೇನ್, ಬೆಲ್ಜಿಯಂ, ಜರ್ಮನಿ, ಮಸ್ಕತ್, ಕತಾರ್, ಹಾಲಂಡ್, ಬ್ಯಾಂಗಕಾಕ್, ಸಿಂಗಾಪೂರ, ದುಬೈ, ಅರ್ಜೈಂಟಿನಾ, ಪೋರ್ತುಗಲ್ ಇತ್ಯಾದಿ.

# 212, 'BANSURI', 6th Main, Sapthagirinagar Layout, Hosakerehalli,
BSK 3rd Stage, Bangalore – 560085. Ph: 080-26723855. e:pravingodkhindi@hotmail.com

**ಬಹುಮುಖ ಪ್ರತಿಭೆಯ ಕಲಾವಿದ**

ಪ್ರವೀಣರಿಗೆ ಕಲೆ ದೈವದತ್ತ ಕಾಣಿಕೆ. ಹಾಗೆಯೇ ವಿವಿಧ ಕಲಾಪ್ರಕಾರಗಳಲ್ಲಿ ಪಾರಂಗತ. ಪ್ರಧಾನವಾಗಿ ಶ್ರೇಷ್ಠ ಕೊಳಲುವಾದಕರಾಗಿದ್ದರೂ, ಸಂಗೀತ ಸಂಯೋಜನೆ, ಗಾಯನ, ರಂಗ/ಟಿ.ವಿ. ಧಾರಾವಾಹಿಗಳಲ್ಲಿ ಅಭಿನಯ, ಹಾರ್ಮೋನಿಯಂ ವಾದನ – ಇವುಗಳಲ್ಲಿಯೂ ಪರಿಣತಿ ಸಾಧಿಸಿರುವುದು ಇವರ ಹೆಗ್ಗಳಿಕೆ. ನಾಡಿನ ಹೆಸರಾಂತ ಕವಿವರ್ಯರಾದ ದ.ರಾ.ಬೇಂದ್ರೆ, ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ, ಎಂ.ಎನ್.ವ್ಯಾಸರಾವ ಇತ್ಯಾದಿ ಕವಿಗಳ ರಚನೆಗಳಿಗೆ ಸುಮಧುರ ಸಂಗೀತ ಸಂಯೋಜನೆ ಮಾಡಿ ಸೈ ಎನಿಸಿದ್ದಾರೆ. ಇವರು ಸಂಗೀತ ಸಂಯೋಜಿಸಿದ ಗೀತೆಗಳಲ್ಲಿ ಹಲವಾರು ಟಿ.ವಿ. ಧಾರಾವಾಹಿಗಳ ಶೀರ್ಷಿಕೆ ಗೀತೆಗಳೂ ಸೇರಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಗರ್ವ, ಆಘಾತ, ಮಳೆಬಿಲ್ಲು, ಪರಂಪರೆ, ರಾಧಾ, ಪುಣ್ಯಕೋಟಿ, ಮುಂಬೆಳಗು, ಪಯಣ, ಪ್ರೀತಿ ಇಲ್ಲದ ಮೇಲೆ, ಮನೆಯೊಂದು ಮೂರು ಬಾಗಿಲು, ಮಹಾನವಮಿ, ಸ್ವಾಭಿಮಾನ, ಮಂಜು ಮುಸುಕಿದ ಹಾದಿ, ರಾಧಾಕಲ್ಯಾಣ, ಎರಡು ಕನಸು, ಮಹಾಪರ್ವ. ಕಥಕ್, ಭರತನಾಟ್ಯ ಮತ್ತು ಶಾಸ್ತ್ರೀಯ ನೃತ್ಯರೂಪಕಗಳಿಗೆ ಕೂಡ ಸಂಗೀತ ಸಂಯೋಜನೆ ಮಾಡಿದ್ದು, ರಾಷ್ಟ್ರಾದ್ಯಂತ ಕಲಾರಸಿಕರ ಮನಸೂರೆಗೊಂಡಿದ್ದಾರೆ.

ಖ್ಯಾತ ಗಾಯಕ ಡಾ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಸಹಯೋಗದಲ್ಲಿ ಈ–ಟಿ.ವಿ. ಕನ್ನಡ ವಾಹಿನಿಯಲ್ಲಿ ಪ್ರಸಾರವಾದ ಜನಜನಿತ 'ಎದೆತುಂಬಿ ಹಾಡುವೆನು' ಧಾರಾವಾಹಿಯ ಮುಖೇನ ಪ್ರವೀಣ ಮನೆ ಮನೆಯ ಮಾತಾಗಿದ್ದಾರೆ. ಶಾಸ್ತ್ರೀಯ, ಪಾಶ್ಚಾತ್ಯ ಮತ್ತು ಲಘು ಶಾಸ್ತ್ರೀಯ ಸಂಗೀತದ ಪ್ರಕಾರಗಳನ್ನು ಆಧರಿಸಿದ ಚಲನಚಿತ್ರ ಗೀತೆಗಳ 'ರಾಗರಂಜಿನಿ' ಟಿ.ವಿ. ಧಾರಾವಾಹಿಯನ್ನು ಪ್ರವೀಣ ಅವರು ಅತ್ಯಂತ ಆಕರ್ಷಕ ಶೈಲಿಯಲ್ಲಿ ಪ್ರಸ್ತುತಪಡಿಸಿದ್ದು ಅಪಾರ ಜನಮೆಚ್ಚುಗೆಗೆ ಪಾತ್ರವಾಗಿದೆ. ಶಾಸ್ತ್ರೀಯ ಸಂಗೀತಪ್ರಧಾನ ಧಾರಾವಾಹಿಯ ಮೂಲಕ ಸಂಗೀತಾಸಕ್ತರಲ್ಲಿ ಸಂಗೀತದ ಬಗ್ಗೆ ತಿಳಿವಳಿಕೆ ನೀಡುವ ಪ್ರವೀಣರ ಮಹೋದ್ದೇಶ ಈಡೇರಿದೆ. ಇವರ ಪ್ರಸ್ತುತಿ, ದೇಶ–ವಿದೇಶಗಳ ಎಲ್ಲ ವಯೋಮಾನದ ಸಂಗೀತಾಸಕ್ತರ ಮೆಚ್ಚುಗೆ ಗಳಿಸಿದ್ದು, ಪ್ರಪಂಚದಾದ್ಯಂತ ಲಕ್ಷಾಂತರ ಪ್ರೇಕ್ಷಕವೃಂದದ ಹೃದಯ ತಟ್ಟಿದೆ.

**ಮೂರು ತಲೆಮಾರಿನ ಕೊಳಲುವಾದಕರು**

ಪ್ರವೀಣ ಅವರ ಬಗ್ಗೆ ಇನ್ನೊಂದು ಉಲ್ಲೇಖಿಸಲೇಬೇಕಾದ ಸಂಗತಿಯೆಂದರೆ, ಮೂರು ತಲೆಮಾರಿನ – ಅಂದರೆ, ತಂದೆ ಪಂ.ವೆಂಕಟೇಶ ಗೋಡಖಿಂಡಿ, ಪ್ರವೀಣ ಗೋಡಖಿಂಡಿ ಮತ್ತು ಪುತ್ರ ಷಡ್ಜ – ಈ ಮೂವರೂ ಕಲಾವಿದರು ಒಂದೇ ವೇದಿಕೆಯ ಮೇಲೆ, ಏಕಕಾಲಕ್ಕೆ ಕೊಳಲುವಾದನ ಪ್ರಸ್ತುತಪಡಿಸುವುದು ಪ್ರಾಯಶಃ ಪ್ರಪಂಚದಲ್ಲಿಯೇ ಪ್ರಥಮ ದಾಖಲೆ. ಮೊಮ್ಮಗ ಷಡ್ಜ, ತೀರ ಎಳೆಯ ವಯಸ್ಸಿನಲ್ಲಿಯೇ ಸಂಗೀತದ ಸ್ವರಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಎಳೆ ಎಳೆಯಾಗಿ ಪ್ರಸ್ತುತಪಡಿಸುತ್ತಿರುವುದು ಅಜ್ಜ ಪಂ.ವೆಂಕಟೇಶ ಗೋಡಖಿಂಡಿಯವರಿಗೆ ಹೆಮ್ಮೆ ಮತ್ತು ಸಂತಸ ತಂದಿದೆ. ಮುಂಬರುವ ದಿನಗಳಲ್ಲಿ ಷಡ್ಜ ಸಂಗೀತಲೋಕದ ಮಿನುಗುತಾರೆಯಾಗಿ ಮಿಂಚುವನೆಂಬ ಭರವಸೆ ತಾಳಿದ್ದಾರೆ ಸಂಗೀತ ವಿಮರ್ಶಕರು.

ಉಸ್ತಾದ ಝುಕೀರ್ ಹುಸೇನ, ಡಾ.ಬಾಲಮುರಳಿಕೃಷ್ಣ ಮುಂತಾದ ಸಂಗೀತ ದಿಗ್ಗಜರೊಂದಿಗೆ ಕಲಾ ಪ್ರದರ್ಶನ ನೀಡುತ್ತಿರುವುದು ಪ್ರವೀಣ ಅವರ ಕಲಾನೈಪುಣ್ಯತೆಗೆ ಸಾಕ್ಷಿ. ಡಾ.ಕದ್ರಿ ಗೋಪಾಲನಾಥ, ಪಂ.ತರುಣ ಭಟ್ಟಾಚಾರ್ಯ, ಪಂ.ವಿಶ್ವಮೋಹನ ಭಟ್ಟ, ವಿದ್ವಾನ್ ರವಿಕಿರಣ, ಮೈಸೂರು ನಾಗರಾಜ ಮತ್ತು ಮಂಜುನಾಥ, ಪಂ. ವಿಕ್ರಮ ಘೋಷ, ವಿದ್ವಾನ್ ಕುಮಾರೇಶ ಮುಂತಾದ ಪ್ರಖ್ಯಾತ ಕಲಾವಿದರೊಂದಿಗೂ ಜುಗಲಬಂದಿ ಕಾರ್ಯಕ್ರಮ ನೀಡಿ ಪ್ರತಿಭೆ ಪ್ರದರ್ಶಿಸಿದ್ದಾರೆ.

**ಫ್ಯೂಶನ್ ಕಲಾವಿದರಾಗಿ**

ಪ್ರವೀಣ ಗೋಡಖಿಂಡಿ ಅವರು ಹಿಂದುಸ್ಥಾನಿ, ಕರ್ನಾಟಕಿ ಮತ್ತು ಪಾಶ್ಚಾತ್ಯ ಸಂಗೀತ ಪ್ರಕಾರಗಳ ಸಮ್ಮಿಳಿತ 'ಕೃಷ್ಣ' ಎಂಬ ಫ್ಯೂಶನ್ ಬ್ಯಾಂಡನ್ನು ಸಂಯೋಜಿಸಿದ್ದಾರೆ. ವೈಶಿಷ್ಟ್ಯಪೂರ್ಣವಾಗಿರುವ ಈ ಬ್ಯಾಂಡ್‌ನ ಫ್ಯೂಶನ್ ಸಂಗೀತ ಅತ್ಯಂತ ಪ್ರಶಂಸೆಗೆ ಪಾತ್ರವಾಗಿದೆ. ಪ್ರವೀಣ ಅವರ ಸಮಕಾಲೀನ ಖ್ಯಾತ ಜಾಝ್ ಪಿಯಾನಿಸ್ಟ್ ಲೂಯಿಸ್

ಬ್ಯಾಂಕ್ಸ್ ಮತ್ತು ಖ್ಯಾತ ಡ್ರಮ್ಮರ್ ಶಿವಮಣಿ ಅವರ ಸಹಯೋಗದಲ್ಲಿ ಸ್ವತಂತ್ರವಾಗಿ ಪರಿಶ್ರಮಪೂರ್ವಕ ಸಾಧನೆಗೈದಿದ್ದಾರೆ. ಹೆಸರಾಂತ ಗಾಯಕರಾದ ಹರಿಹರನ್ ಮತ್ತು ಶಂಕರ ಮಹಾದೇವನ್ ಅವರೊಂದಿಗೂ ವೇದಿಕೆ ಹಂಚಿಕೊಂಡಿದ್ದಾರೆ. ಹಾಲೆಂಡಿನ BLOF ಮತ್ತು ಲಯಲಹಿರಿ ಮುಂತಾದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬ್ಯಾಂಡ್‌ಗಳಲ್ಲಿ ಅತಿಥಿ ಕಲಾವಿದರಾಗಿಯೂ ತಮ್ಮ ಪ್ರತಿಭೆ ಮೆರೆದಿದ್ದಾರೆ.

**ಕಲಾಪ್ರದರ್ಶನ ನೀಡಿದ ಪ್ರಮುಖ ಸಂಗೀತ ಸಭೆಗಳು**

ಪ್ರವೀಣ ಅವರು ರಾಷ್ಟ್ರದ ಉದ್ದಗಲಕ್ಕೂ ಪ್ರಖ್ಯಾತ ಸಂಗೀತ ಸಮ್ಮೇಳನಗಳಲ್ಲಿ ತಮ್ಮ ಕಲಾಸಿರಿಯನ್ನು ಪ್ರದರ್ಶಿಸಿದ್ದು, ಅವುಗಳಲ್ಲಿ ಪ್ರಮುಖವಾದವುಗಳು ಇಂತಿವೆ:

ತಾನಸೇನ ಸಂಗೀತ ಸಮಾರೋಹ, ಗ್ವಾಲಿಯರ್

ಸಾಲ್ಟ್ ಲೇಕ್ ಸಿಟಿ ಫೆಸ್ಟಿವಲ್, ಕೋಲ್ಕತ್ತಾ

ಕಲ್ ಕೆ ಕಲಾಕಾರ ಸಮ್ಮೇಳನ, ಮುಂಬೈ

ಟಾಟಾನಗರ ಸಂಗೀತ ಸಮ್ಮೇಳನ, ಟಾಟಾನಗರ

ಪಂಚಾಕ್ಷರಿ ಗವಾಯಿ ಪುಣ್ಯತಿಥಿ ಸಮ್ಮೇಳನ, ಭೋಪಾಳ

ಸವಾಯಿ ಗಂಧರ್ವ ಸಂಗೀತ ಸಮ್ಮೇಳನ, ಪುಣೆ ಮತ್ತು ಗದಗ

ದಿಲ್ಲಿ ಅಂತಾರಾಷ್ಟ್ರೀಯ ಕಲಾ ಸಮ್ಮೇಳನ, ದಿಲ್ಲಿ

ಪಂಡಿತ ದೀನಾನಾಥ ಮಂಗೇಶಕರ ಸಂಗೀತ ಸಮಾರೋಹ, ಗೋವಾ

ಸಂಕಟ ಮೋಚನ ಸಮ್ಮೇಳನ, ವಾರಣಾಸಿ

ಭಾತಖಂಡೆ ಸಂಗೀತ ಸಮಾರೋಹ, ಮುಂಬೈ

ಗುರುರಾವ ದೇಶಪಾಂಡೆ ಸಂಗೀತ ಸಮಾರೋಹ, ಬೆಂಗಳೂರು ಮತ್ತು ಪುಣೆ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕೋಲ್ಕತ್ತಾ

ಲಕ್ಷ್ಮೀನಾರಾಯಣ ಸಂಗೀತ ಸಮಾರೋಹ, ಅಮೃತಸರ

ಕಾನ್ಸರ್ಟ ಫಾರ್ ಸಂತೂರ ಆಶ್ರಮ, ಕೋಲ್ಕತ್ತಾ

ರೆಹಮತ್ ಖಾನ ಪುಣ್ಯತಿಥಿ ಸಮಾರೋಹ, ಧಾರವಾಡ

ಮಲ್ಲಿಕಾರ್ಜುನ ಮನಸೂರ ಸಂಗೀತ ಸಮಾರೋಹ, ಧಾರವಾಡ

ಬಸವರಾಜ ರಾಜಗುರು ಸಂಗೀತ ಸಮಾರೋಹ, ಧಾರವಾಡ

ಪಂಡಿತ ಭೀಮಸೇನ ಜೋಶಿ ಶ್ರದ್ಧಾಂಜಲಿ, ಧಾರವಾಡ

*****

# 212, 'BANSURI', 6th Main, Sapthagirinagar Layout, Hosakerehalli,
BSK 3rd Stage, Bangalore – 560085. Ph: 080-26723855. e:pravingodkhindi@hotmail.com